ಶ್ರೀ ಹೆಚ್.ಜಿ. ಗೋವಿಂದೇಗೌಡ : ಈಗ ನಾವು ಯಾವುದೇ ಸೌಲಭ್ಯಗಳನ್ನು ಕೊಡುವುದಾದರೆ ಅವಶ್ಯಕತೆ ಎಲ್ಲಿ ಇದೆ ಅಂತಹ ಹೈಸ್ಕೂಲ್‌ಗಳಿಗೆ ಕೊಡುತ್ತಿದ್ದೇವೆ ಅವಶ್ಯಕತೆ ಇಲ್ಲದೇ ಇರತಕ್ಕಂಥ ಹೈಸ್ಕೂಲ್‌ಗಳಿಗೆ ಕೊಡುತ್ತಿದ್ದೇವೆ. ಎಂದು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ಅದನ್ನು ವಜಾ ಮಾಡುವುದಕ್ಕೆ ಸಿದ್ಧನಾಗಿದ್ದೇನೆ. ಅನೇಕ ಕಡೆ ಬೆಂಚುಗಳು ಇಲ್ಲ, ಬೋರ್ಡ್‌ಗಳು ಇಲ್ಲ ಅಂತಹ ಕಡೆ ಕೊಡಬೇಕು. ನಾನು ಇಡೀ ರಾಜ್ಯದ ಆಗುಹೋಗುಗಳ ಬಗ್ಗೆ ಚಿಂತನೆ ಮಾಡುತ್ತಿದ್ದೇನೆ. ತಾವು ಏನು ಹೇಳಿದ್ದೀರಿ ಅದನ್ನು ದಯವಿಟ್ಟು ಕೊಡಿ ನಾನು ನೋಡುತ್ತೇನೆ. ಅದನ್ನು ನೋಡಿಕೊಂಡು ಅದರ ಬಗ್ಗೆ ಏನು ಮಾಡಬೇಕು ಅದನ್ನು ಮಾಡುತ್ತೇನೆ.

ಅಧ್ಯಕ್ಷರು : ಮಾಡುತ್ತಾರೆ ಬಿಡಿ.

ಸಾಂಪ್ರದಾಯಿಕವಲ್ಲದ ಇಂಧನ ಪದ್ಧತಿಗೆ ಸಹಾಯಧನ

554 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಪರಿಸರ, ಜೀವಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಸಂಪ್ರದಾಯಕವಲ್ಲದ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಸಂಪ್ರದಾಯಕ ಇಂಧನ ವ್ಯವಸ್ಥೆಗಳು ಯಾವುವು?

ಆ) ಸರ್ಕಾರವು ಯಾವ ಯಾವ ಅಸಂಪ್ರದಾಯಿಕ ಇಂಧನ ವ್ಯವಸ್ಥೆಗೆ ಎಷ್ಟು (ಶೇಖಡವಾರು) ಸಬ್ಸಿಡಿ ನೀಡಲಾಗುತ್ತಿದೆ.

ಇ) ಕಳೆದ 3 ವರ್ಷಗಳಲ್ಲಿ ಈ ವ್ಯವಸ್ಥೆಗೆ ಒಟ್ಟು ಎಷ್ಟು ಸಬ್ಸಿಡಿ ನೀಡಲಾಗಿದೆ.

ಈ) ಈ ಅಸಂಪ್ರದಾಯಕ ವ್ಯವಸ್ಥೆಯಿಂದ ಶೇಕಡಾ ಎಷ್ಟು ಪರ್ಯಾಯ ಇಂಧನ ದೊರಕುತ್ತಿದೆ.

ಉ) ಈ ವ್ಯವಸ್ಥೆಯಿಂದ ಫಲಕಾರಿ ಫಲಿತಾಂಶ ದೊರೆತಿದೆಯೇ?

ಶಿವಣ್ಣನವರ್ ಬಸವರಾಜ ನೀಲಪ್ಪ (ಪರಿಸರ, ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಸಂಪ್ರದಾಯಕವಲ್ಲದ ಇಂಧನ ರಾಜ್ಯ ಸಚಿವರು) :

ಅ) ಸಕ್ಕರೆ ಕಾರ್ಖಾನೆಗಳಿಂದ ಮುಖ್ಯವಾದ ಅಸಂಪ್ರದಾಯಕ ಇಂಧನ ವ್ಯವಸ್ಥೆಗಳು ಯಾವುವೆಂದರೆ, ಕಿರು ಜಲವಿದ್ಯುತ್, ಗಾಳಿ ಶಕ್ತಿ, ಸೌರ ಶಕ್ತಿ, ಜೈವಿಕ ಶಕ್ತಿ (ಸಹ ಶಕ್ತಿ ಉತ್ಪಾದನೆ), ಸಮುದ್ರದ ಅಲೆಗಳ ಶಕ್ತಿ ಮತ್ತು ಭೂಮಿಯೊಳಗಿನ ಉಷ್ಣತೆಯ ಶಕ್ತಿ.

ಆ) ರಾಜ್ಯ ಸರ್ಕಾರವು ಕೋಜನರೇಶನ್ ಉತ್ಪಾದನೆಯನ್ನು ಹೊರತುಪಡಿಸಿ ಇತರ ಯಾವುದೇ ಅಸಂಪ್ರದಾಯಕ ಇಂಧನ ವ್ಯವಸ್ಥೆಗಳಿಂದ ವಿದ್ಯುತ್ ಉತ್ಪಾದಿಸುವ ಯೋಜನೆಗಳಿಗೆ ಅನುದಾನವನ್ನು ನೀಡುತ್ತಿಲ್ಲ. ಕೋಜನರೇಶನ್‌ನಿಂದ ವಿದ್ಯುತ್ ಉತ್ಪಾದಿಸುವ ಸಕ್ಕರೆ ಕಾರ್ಖಾನೆಗಳಿಗೆ ಕಾರ್ಖಾನೆಗಳು ಗ್ರಿಡ್‌ಗೆ ಸರಬರಾಜು ಮಾಡುವ ಪ್ರತಿಯೊಂದು ಮೆಗಾವ್ಯಾಟ್‌ಗೆ ರೂ. 25 ಲಕ್ಷಗಳನ್ನು

.ಒಂದು ಬಾರಿ ಅನುದಾನವಾಗಿ ನೀಡುವುದು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅಸಂಪ್ರದಾಯಕ ಯೋಜನೆಗಳಿಗೆ ಅನೇಕ ಸವಲತ್ತುಗಳನ್ನು ಮತ್ತು ಆರ್ಥಿಕ ಉತ್ತೇಜನಗಳನ್ನು ನೀಡುತ್ತಿದೆ. ಅವುಗಳನ್ನು ಅನುಬಂಧದಲ್ಲಿ ವಿವರವಾಗಿ ನೀಡಲಾಗಿದೆ.

ಇ) ಇದುವರೆಗೆ ಯಾವುದೇ ಅನುದಾನವನ್ನು ನೀಡಿರುವುದಿಲ್ಲ.

ಈ) ರಾಜ್ಯದಲ್ಲಿ ಉತ್ಪಾದಿಸುತ್ತಿರುವ ವಿದ್ಯುತ್ತಿನಲ್ಲಿ ಸುಮಾರು ಶೇಕಡಾ ಒಂದರಷ್ಟು ವಿದ್ಯುತ್ತನ್ನು ಅಸಂಪ್ರದಾಯಕ ಇಂಧನ ವ್ಯವಸ್ಥೆಗಳಿಂದ ಉತ್ಪಾದಿಸಲಾಗುತ್ತಿದೆ.

ಉ) <u>ವಿವರಣೆ</u> :

1)	ಸಹಶಕ್ತಿ	2.5	ಮೆ.ವ್ಯಾ.
2)	ಗಾಳಿ ಶಕ್ತಿ	6.0	ಮೆ.ವ್ಯಾ
3)	ಕಿರು ಜಲ	25.00	ಮೆ.ವ್ಯಾ
	ಒಟ್ಟು	**33.5**	**ಮೆ.ವ್ಯಾ.**

ಅನುಬಂಧ

ವಿಧಾನ ಸಭೆಯ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 4210 ರ (ಅ) ಪ್ರಶ್ನೆಗೆ ಸಂಬಂಧಿಸಿದಂತೆ ಸರ್ಕಾರದ ಆರ್ಥಿಕ ಉತ್ತೇಜನ ಮತ್ತು ಸವಲತ್ತುಗಳ ವಿವರ

ಅ) ಅಸಂಪ್ರದಾಯಕ ಇಂಧನ ವ್ಯವಸ್ಥೆಗಳಿಂದ ವಿದ್ಯುತ್ ಉತ್ಪಾದಿಸಲು ರಾಜ್ಯ ಸರ್ಕಾರವು ನೀಡುವ ಸವಲತ್ತುಗಳು ಮತ್ತು ಉತ್ತೇಜನಗಳು.

ವ್ಯವಸ್ಥೆಗಳು	ಆರ್ಥಿಕ ಉತ್ತೇಜನ	ವಿದ್ಯುತ್ ಸರಬರಾಜು (ಸರಬರಾಜು ಮಾಡುವ ವಿದ್ಯುತ್ತಿನ ಶೇಕಡವಾರು)	ಬ್ಯಾಂಕಿಂಗ್ ಶುಲ್ಕ (ತಿಂಗಳ ಕೊನೆಯಲ್ಲಿ ಕೂಡಿಟ್ಟ ವಿದ್ಯುತ್ತಿನ ಶೇಕಡವಾರು)	ಮೂರನೆ ವ್ಯಕ್ತಿಗೆ ಮಾರಾಟ ಮಾಡಲು ಸೌಲಭ್ಯ
ಕಿರುಜಲ	ಇಲ್ಲಾ	1) 1 ಮೆಗಾವ್ಯಾಟ್ ವರೆಗೆ 2		ಮಾರಾಟ ಮಾಡಬಹುದು.
		2) 1 ರಿಂದ 3 ಮೆಗಾವ್ಯಾಟ್‌ಗೆ 5	ಶೇಕಡ 2	ದರ ನಿಗದಿಯನ್ನು ಮಾರಾಟಗಾರರು ನಿರ್ಧರಿಸಬಹುದು.
		3) 3 ರಿಂದ 20 ಮೆಗಾವ್ಯಾಟ್ ವರೆಗೆ 10		
ಗಾಳಿ ಶಕ್ತಿ	ಇಲ್ಲಾ	ಶೇಕಡ 2	ಶೇಕಡ 2	-"-
ಕೋ-ಜನರೇಷನ್	ಒಂದು ಭಾರಿ ಅನುದಾನ ಪ್ರತಿ ಒಂದು ಮೆಗಾವ್ಯಾಟ್‌ಗೆ ರೂ. 25 ಲಕ್ಷಗಳು	ಶೇಕಡ 6	ಶೇಕಡ 2	-"-

ಇತರೆ ಪ್ರೋತ್ಸಾಹಗಳು

1) ಅಸಂಪ್ರದಾಯಕ ಇಂಧನ ಮೂಲಗಳಿಂದ ಉತ್ಪಾದಿಸಿದ ವಿದ್ಯುತನ್ನು ರಾಜ್ಯ ವಿದ್ಯುತ್ ಮಂಡಳಿಗೆ ಮಾರಾಟ ಮಾಡಬಹುದಾಗಿದ್ದು ಪ್ರತಿ ಯೂನಿಟ್ ವಿದ್ಯುತ್‌ಗೆ 1997-98ರ ಬೆಲೆಯಲ್ಲಿ ರೂ. 2.60 ಗಳಾಗಿದ್ದು ಪ್ರತಿ ವರ್ಷ ಶೇಕಡಾ 5 ರಷ್ಟನ್ನು ಬೆಲೆಯಲ್ಲಿ ಹೆಚ್ಚಳವಿರುತ್ತದೆ.

2) ಹೊಸ ಕಾರ್ಖಾನೆಗಳಿಗೆ ಸ್ವಂತ ಬಳಕೆಗೆ ಉತ್ಪಾದಿಸುವ ವಿದ್ಯುತ್‌ನ ಮೇಲೆ 5 ವರ್ಷಗಳವರೆಗೆ ವಿದ್ಯುತ್ ತೆರಿಗೆ ವಿನಾಯಿತಿ.

3) 31-7-1997 ರಿಂದ ಅನ್ವಯಿಸುವಂತೆ 20 ಮೆಗಾವ್ಯಾಟ್ ವರೆಗೆ ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಯೋಜನೆಗಳಿಗೆ ನೀರಿನ ಮೇಲಿನ ರಾಜಧನ ವಿನಾಯಿತಿ.

(ಬಿ) ಅಸಂಪ್ರದಾಯಕ ಇಂಧನ ವ್ಯವಸ್ಥೆಗಳಿಂದ ವಿದ್ಯುತ್ ಉತ್ಪಾದಿಸಲು ಕೇಂದ್ರ ಸರ್ಕಾರವು ನೀಡುವ ಸವಲತ್ತುಗಳು ಮತ್ತು ಉತ್ತೇಜನಗಳು.

1) ಗಾಳಿ ಶಕ್ತಿ ವಿದ್ಯುತ್ ಉತ್ಪಾದನೆ ಯೋಜನೆಗಳು ಶೇಕಡಾ ನೂರರವರೆಗೆ ಸವಕಳಿ ಭತ್ಯೆ ಪಡೆಯುವ ಸೌಲಭ್ಯ (ರೆಫರೆನ್ಸ್ ಸೆಕ್ಷನ್ 32 ರೂಲ್ಸ್ 5 ಆಪೆಂಡಿಕ್ಸ್ 1 ಆಫ್ ಇನ್‌ಕರಿ ಟ್ಯಾಕ್ಸ್ ಆಕ್ಟ್ 1961) ಈ ಸೌಲಭ್ಯವನ್ನು ವರ್ಷದಲ್ಲಿ ಕನಿಷ್ಟ 6 ತಿಂಗಳ ಬಳಕೆಯಲ್ಲಿರುವ ಘಟಕಗಳು ಬಳಸಿಕೊಳ್ಳಬಾಹುದು.

2) ಖಾಸಗಿ ಸಂಸ್ಥೆಗಳು ಗಾಳಿ ಶಕ್ತಿ ವಿದ್ಯುತ್‌ನಿಂದ ಗಳಿಸಿದ ಲಾಭಕ್ಕೆ 5 ವರ್ಷಗಳವರೆಗೆ ತೆರಿಗೆಯಲ್ಲಿ ವಿನಾಯಿತಿಯಿರುತ್ತದೆ. ಈ ಸೌಲಭ್ಯವನ್ನು ವಿದ್ಯುತ್ ಉತ್ಪಾದನೆ, ಅಥವಾ ಉತ್ಪಾದನೆ ಮತ್ತು ಸರಬರಾಜಿನಲ್ಲಿ ತೊಡಗಿರುವ ಹೊಸ ಕಾರ್ಖಾನೆಗಳು ಇತರೆ ಮೂಲಗಳನ್ನು ಉಪಯೋಗಿಸಿಕೊಂಡು ವಿದ್ಯುತ್ ಉತ್ಪಾದನೆಯಲ್ಲಿ ತೊಡಗಿದ್ದರೂ ಸಹ ನೀಡಲಾಗುವುದು.

3) ಕೇಂದ್ರ ವಹಿವಾಟು (ಸುಂಕ) ತೆರಿಗೆಯಲ್ಲಿ ರಿಯಾಯಿತಿ.

ಕಿರುಜಲ ವಿದ್ಯುತ್

1) 3 ಮೆಗಾವ್ಯಾಟ್ ಸಾಮರ್ಥ್ಯದ ವರೆಗೆ ಶೇ. 2.5 ರಷ್ಟು ಬಡ್ಡಿಯಲ್ಲಿ ಅನುದಾನ.

2) ಸ್ವಂತ ಬಳಕೆಗೆ ಉತ್ಪಾದಿಸುವ ವಿದ್ಯುತ್ತಿಗೆ5 ವರ್ಷಗಳವರೆಗೆ ವಿದ್ಯುತ್ ತೆರಿಗೆ ವಿನಾಯಿತಿ.

ಕೋ-ಜನರೇಷನ್

ಕೋ ಜನರೇಷನ್ ಸ್ಥಾವರದಿಂದ ವಿದ್ಯುತ್ ಉತ್ಪಾದಿಸಿ ರಾಜ್ಯ ವಿದ್ಯುತ್ ಗ್ರಿಡ್‌ಗೆ ಸರಬರಾಜು ಮಾಡುವ ಪ್ರತಿ ಮೆಗಾವ್ಯಾಟ್‌ಗೆ ಕೇಂದ್ರ ಸರ್ಕಾರವು ರೂ: 35 ಲಕ್ಷದಿಂದ ರೂ. 70 ಲಕ್ಷಗಳ ಆರ್ಥಿಕ ಸಹಾಯವನ್ನು ಒದಗಿಸುತ್ತದೆ.

ಪ್ರತ್ಯೇಕ್ಷಣಾಯೋಜನೆಗಳಿಗೆ

1) ಹಳೆಯ ಯೋಜನೆಗಳು :

ಸಹಕಾರಿ, ಸಾರ್ವಜನಿಕ ಕ್ಷೇತ್ರದ 9 ಯೋಜನೆಗಳಿಗೆ ಸೀಮಿತವಾಗಿದೆ. ಖಾಸಗೀ ಕ್ಷೇತ್ರದ 4 ಯೋಜನೆಗಳಿಗೆ ಸೀಮಿತವಾಗಿದೆ.

ಖಾಸಗಿ ಕ್ಷೇತ್ರದಲ್ಲಿ

ಬಂಡವಾಳ ಸಹಾಯ ಧನವಾಗಿ ಪ್ರತಿಯೊಂದು ಮೆಗಾವ್ಯಾಟ್‌ಗೂ ರೂ: 70 ಲಕ್ಷಗಳು ಅಥವಾ ಉಪಕರಣಗಳ ಬೆಲೆಯ ಶೇ: 30 ರಷ್ಟು ಇದರಲ್ಲಿ ಯಾವುದೂ ಕಮ್ಮಿಯಾಗಿರುತ್ತದೆಯಾ ಅದು ಗರಿಷ್ಟ 6 ಕೋಟಿ ರೂ. ಗಳು.

ಸಹಕಾರಿ ಕ್ಷೇತ್ರಕ್ಕೆ

ಉತ್ಪಾದಿಸುವ ಪ್ರತಿಯೊಂದು ಮೆಗಾವ್ಯಾಟ್ ಹೆಚ್ಚುವರಿ ವಿದ್ಯುತ್ತಿಗೆ ರೂ: 2 ಕೋಟಿ ಅಥವಾ ಯೋಜನಾ ವೆಚ್ಚದ ಶೇ:50 ರಷ್ಟು ಇದರಲ್ಲಿ ಯಾವುದೂ ಕಮ್ಮಿಯಾಗಿರುತ್ತದೆಯೋ ಅದನ್ನು ಹಣಕಾಸು ಸಂಸ್ಥೆಗಳಿಗೆ ನೀಡಲಾಗುತ್ತದೆ. ನಂತರ ಮೇಲಿನ ಹಣವನ್ನು ಉಪಯೋಗಿಸಿಕೊಂಡು ಹಣಕಾಸು ಸಂಸ್ಥೆಗಳು ಸಕ್ಕರೆ ಕಾರ್ಖಾನೆಗಳಿಗೆ 1 ಮೆಗಾವ್ಯಾಟ್ ಹೆಚ್ಚುವರಿ ವಿದ್ಯುತ್ ಉತ್ಪಾದನೆಗೆ ರೂ. 70 ಕೋಟಿ : ಲಕ್ಷ ಬಂಡವಾಳ ಸಹಾಯ ಧನವಾಗಿ ಗರಿಷ್ಟ 6 ಕೋಟಿ. ರೂ. ಗಳನ್ನು ಧೀರ್ಘಾವಧಿ ಅಲ್ಲ ಬಡ್ಡಿ ದರದಲ್ಲಿ ಶೇ: 9 ರಂತೆ 1 ಮೆಗಾವ್ಯಾಟ್‌ಗೆ 1.3 ಕೋಟಿ ರೂ. ಗಳವರೆಗೆ ಸಾಲ ನೀಡುವುದು. ಇದರ ಜೊತೆಗೆ ರಾಜ್ಯ ಸರ್ಕಾರದಿಂದ ಪ್ರೋತ್ಸಾಹ ಧನ ರೂ. 25 ಲಕ್ಷ ರೂ. ಗಳನ್ನು ಪ್ರತಿಯೊಂದು ಹೆಚ್ಚಿವರಿ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ ಕೊಡಬೇಕಾಗಿರುತ್ತದೆ.

2) ಹೊಸಯೋಜನೆಗಳಿಗೆ ಮೇಲೆ ತಿಳಿಸಿದ ಅರ್ಧದಷ್ಟು.

(ಬ) ಹಣಕಾಸು ಸಂಸ್ಥೆಗಳಿಗೆ ಬಡ್ಡಿಗೆ ಸಹಾಯ ಧನ.

ಅ) ಯೋಜನೆ 4 ಮೆಗಾವ್ಯಾಟ್‌ಗಿಂತಲೂ ಮೇಲ್ಪಟ್ಟು ಹೆಚ್ಚುವರಿ ವಿದ್ಯುತ್ ಉತ್ಪಾದಿಸುವಂತಿದ್ದರೆ, ಪ್ರತಿಯೊಂದು ಹೆಚ್ಚುವರಿ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ ರೂ : 35 ಲಕ್ಷಗಳಂತೆ ಯೋಜನಾ ವೆಚ್ಚದ ಶೇ: 60 ರವರೆಗೆ ಕೊಡಲಾಗುವುದು. ಈ ಯೋಜನಾ ವೆಚ್ಚ ಪ್ರತಿಯೊಂದು ಹೆಚ್ಚುವರಿ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ ರೂ: 4 ಕೋಟಿಗಳಾಗಿರಬೇಕು.

ಆ) ಯೋಜನೆ 1 ಮೆಗಾವ್ಯಾಟ್‌ನಿಂದ 4 ಮೆಗಾವ್ಯಾಟ್‌ವರೆಗೆ ಹೆಚ್ಚುವರಿ ವಿದ್ಯುತ್ ಉತ್ಪಾದಿಸುವಂತಿದ್ದರೆ. ಪ್ರತಿಯೊಂದು ಮೆಗಾವ್ಯಾಟ್ ಹೆಚ್ಚುವರಿ ವಿದ್ಯುತ್ ಉತ್ಪಾದನೆಗೆ ರೂ: 15 ಲಕ್ಷಗಳಂತೆ ಯೋಜನಾ ವೆಚ್ಚದ ಶೇ: 60 ರಷ್ಟು ಈ ಯೋಜನಾ ವೆಚ್ಚ ಪ್ರತಿಯೊಂದು ಮೆಗಾವ್ಯಾಟ್‌ಗೆ ರೂ: 1.5 ಕೋಟಿಗಳಾಗಿರಬೇಕು.

ಇ) ಈಗಾಗಲೇ ಬಳಸಿ ಮರು ಬಳಸುವ ಉಪಕರಣಗಳಿಗೆ ಮೇಲೆ ತಿಳಿಸಿದ ಅರ್ಧದಷ್ಟು ಆ ಯೋಜನಾ ವೆಚ್ಚ ಪ್ರತಿಯೊಂದು ಹೆಚ್ಚಿವರಿ ಮೆಗಾವ್ಯಾಟಿಗೆ ರೂ:2 ಕೋಟಿಗಳಾಗಿರಬೇಕು.

ಸಿ) ಸಂಕ್ಷಿಪ್ತ ಯೋಜನಾ ವರದಿ ತಯಾರಿಸಲು ತಗುಲಿದ ವೆಚ್ಚದ ಶೇ. 50 ರಷ್ಟು ಅಥವಾ

1) 60 ಎ.ಟಿ.ಎ. ಬಾಯ್ಲರ್‌ಗಳಿಗೆ 5 ಮೆಗಾವ್ಯಾಟ್ ಮೇಲ್ಪಟ್ಟು ರೂ: 4 ಲಕ್ಷ

2) 40 ಎ.ಟಿ.ಎ. ಬಾಯ್ಲರ್4 ಮೆಗಾವ್ಯಾಟ್ ಮೇಲ್ಪಟ್ಟು ರೂ 3 ಲಕ್ಷಗಳು

3) 40 ಎ.ಟಿ.ಎ. ಗಿಂತಕಮ್ಮಿ 4 ಮೆಗಾವ್ಯಾಟ್‌ವರೆಗೆ ರೂ 1 ಲಕ್ಷಗಳು

. ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಅಸಂಪ್ರದಾಯ ಮೂಲದಿಂದ ಬರುವಂತಹ ವಿದ್ಯುತ್ ಯೋಜನೆಗಳು ಯಾವುವು ಎನ್ನುವಂತಹ ವಿಚಾರದಲ್ಲಿ ಸೌರಶಕ್ತಿ ಮತ್ತು ಗಾಳಿ ಶಕ್ತಿ, ಜೈವಿಕ ಶಕ್ತಿಗಳ ಬಗ್ಗೆ ಹೇಳಿದ್ದಾರೆ. ಆದರೆ ಇಂಥ ಅಸಂಪ್ರದಾಯ ಮೂಲದಿಂದ ಉತ್ಪಾದನೆ ಮಾಡುವಂತಹ ವಿದ್ಯುತ್‌ಗೆ ಯಾವ ರೀತಿಯಾದ ಧನಸಹಾಯವನ್ನು ರಾಜ್ಯಸರ್ಕಾರದಿಂದ ಕೊಡುತ್ತಾ ಇಲ್ಲ ಎನ್ನುವ ವಿಚಾರ ಇದೆ. ಪ್ರಾಮುಖ್ಯವಾಗಿ ನಮ್ಮಲ್ಲಿ ಕಂಡುಬರುವುದು ಕಿರುಯೋಜನೆ, ಗಾಳಿಯೋಜನೆಗಳಿಗೆ ರಾಜ್ಯ ಸರ್ಕಾರದಿಂದ ಯಾವ ಅನುದಾನ ಇಲ್ಲದೆ, ಕಳೆದ ಸುಮಾರು ಒಂದು ದಶಕಗಳ ಕಾಲದಿಂದ ಒಂದು ಮೂಲವಾಗಿ ಉಳಿದಿದೆ. ಇಲ್ಲಿ ಕೇವಲ ಶೇಕಡ ಒಂದರಷ್ಟು ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ರಾಜ್ಯಸರ್ಕಾರ ಇಂಥ ಸಣ್ಣ ಸಣ್ಣ ಯೋಜನೆಗಳಿಗೆ ಏಕೆ ಧನಸಹಾಯವನ್ನು ನೀಡುತ್ತಾ ಇಲ್ಲ, ಇದು ಮೊದಲನೆಯ ಪ್ರಶ್ನೆ. ಎರಡನೆಯದಾಗಿ, ನಗರಪ್ರದೇಶಗಳಲ್ಲಿ ಸೌರ ಶಕ್ತಿ ಮತ್ತು ಜೈವಿಕ ಶಕ್ತಿಗಳನ್ನು ಒಂದು ಕೋ-ಆಪರೇಟೀವ್ ಸೊಸೈಟಿಗಳಿಗೆ ವಿದ್ಯುತ್ ಉತ್ಪಾದನೆ ಮಾಡಲು ಅವಕಾಶ ಮಾಡಿಕೊಟ್ಟಿದೆಯಾದರೆ ನಗರಪ್ರದೇಶಗಳಲ್ಲಿ ಇರುವಂತಹ ಗೊಬ್ಬರವನ್ನು ಉಪಯೋಗಿಸಿಕೊಳ್ಳುವುದು ಮತ್ತು ನಗರದ ನೈರ್ಮಲ್ಯವನ್ನು ಕೂಡ ಕಾಪಾಡಬಹುದು ಎನ್ನುವ ವಿಚಾರ ಇತ್ತು. ಅದರ ಬಗ್ಗೆ ಸರ್ಕಾರದಲ್ಲಿ ಏಕೆ ಆಲೋಚನೆ ಮಾಡಲಿಲ್ಲ? ಒಂದು ಖಾತೆಯನ್ನು ತೆರೆದು ಅದಕ್ಕೆ ಒಬ್ಬರು ಮಂತ್ರಿಗಳನ್ನು ನೇಮಿಸಿದ್ದರು ಇದರ ಸಾಧನೆ ಮಾತ್ರ ಕೇವಲ ಶೇಕಡ ಒಂದೇ ಒಂದು ಎನ್ನುವುದು ಬಹಳ ನೋವಿನ ವಿಚಾರ ಇದರ ಬಗ್ಗೆ ಇಂಜಿನಿಯರ್‌ಗಳಿಗೆ ಹಣಕಾಸಿನ ಸಹಾಯ ಮಾಡಿ ಕೆಲಸ ಮಾಡಿಸುವ ಸಾಧ್ಯತೆ ಇದೆಯಾ ಎಂದು ಕೇಳುತ್ತೇನೆ.

ಶ್ರೀ ಬಿ.ಎನ್. ಶಿವಣ್ಣನವರ್ : ಮಾನ್ಯ ಅಧ್ಯಕ್ಷರೆ, ಈ ಅಸಂಪ್ರದಾಯಕ ಇಂಧನ ಸಂಸ್ಥೆ 1996ರಿಂದ ಪ್ರಾರಂಭವಾಗಿದೆ. ಇಲ್ಲಿಯವರೆಗೆ ನಾವು ಹೋದ ಜನರೇಶನ್ ಮುಖಾಂತರ ಸುಮಾರು 2.5 ಮೆಗಾವ್ಯಾಟ್ ಮತ್ತು ಕಿರುಜಲವಿದ್ಯುತ್‌ನಿಂದ 25 ಮೆಗಾವ್ಯಾಟ್ ಗಾಳಿ ಶಕ್ತಿಯಿಂದ ಮೆಗಾವ್ಯಾಟ್ ಒಟ್ಟು 31 ಮೆಗಾವ್ಯಾಟ್ ವಿದ್ಯುತ್ ಶಕ್ತಿಯನ್ನು ಈ ಮೂಲದಿಂದ ಉತ್ಪಾದನೆ ಮಾಡುತ್ತಾ ಇದ್ದೇವೆ. ಇದರ ಜೊತೆಗೆ ರಾಜ್ಯದಲ್ಲಿ ನಾವು ಈ ಮೂರು ರೀತಿಯಿಂದ ಗಾಳಿ, ಕಿರು ಯೋಜನೆ ಮತ್ತು ಕೋ-ಜನರೇಶನ್ ಮುಖಾಂತರ ಸುಮಾರು 1,750 ಮೆಗಾವ್ಯಾಟ್ ವಿದ್ಯುತನ್ನು ನಾವು ಉತ್ಪಾದನೆ ಮಾಡಬಹುದು ಎಂದು ನಮ್ಮ ಸಂಸ್ಥೆ ಸರ್ವೆ ಕಾರ್ಯವನ್ನು ಸಹ ಮುಗಿಸಿದೆ. ಗಾಳಿ ಶಕ್ತಿಯಿಂದ 450 ಮೆಗಾವ್ಯಾಟ್ ಕಿರುಜಲದಿಂದ 1 ಸಾವಿರ ಮೆಗಾವ್ಯಾಟ್, ಕೋ-ಜನರೇಶನ್‌ದಿಂದ ಮೂರು ನೂರು ಮೆಗಾವ್ಯಾಟ್ ಈ ತರ ಒಂದು ಸಮೀಕ್ಷೆಯನ್ನು ನಾವು ನಡೆಸಿದ್ದೇವೆ. ಈ ಪೈಕಿ ಈಗಾಗಲೇ ಸುಮಾರು 356 ಮೆಗಾವ್ಯಾಟ್ ಅಂದ್ರೆ 46 ಮೆಗಾವ್ಯಾಟ್‌ನಷ್ಟು ಗಾಳಿ ಶಕ್ತಿಯಿಂದ ಮತ್ತು 215 ಮೆಗಾವ್ಯಾಟ್ ಕಿರುಜಲದ ಮುಖಾಂತರ ಮತ್ತು ಕೋ-ಜನರೇಶನ್ ಮುಖಾಂತರ 99 ಮೆಗಾವ್ಯಾಟ್ ಸುಮಾರು 356 ಮೆಗಾವ್ಯಾಟ್ ವಿದ್ಯುತನ್ನು ಉತ್ಪಾದನೆ ಮಾಡಲಾಗಿದೆ. ಬೇರೆ ಬೇರೆ ಸಂಸ್ಥೆಯವರು ನಮಗೆ ಈಗಾಗಲೇ ಅರ್ಜಿಯನ್ನು ಹಾಕಿದ್ದಾರೆ. ಅವುಗಳ ಮಂಜೂರಾತಿಗೆ ಸರ್ಕಾರ ಪರಿಶೀಲನೆ ಮಾಡುವ ಹಂತದಲ್ಲಿ ಇದೆ. ಅದೇ ರೀತಿ ಮಾನ್ಯ ಸದಸ್ಯರು ಸೌರಶಕ್ತಿ, ಬಗ್ಗೆ ಕೇಳಿದ್ದಾರೆ: ಸೌರಶಕ್ತಿ ಬಗ್ಗೆ ಈಗಾಗಲೇ ಇದು ಕೇಂದ್ರ ಸರ್ಕಾರ 1993ರ ವರೆಗೆ ಸಬ್ಸಿಡಿ ನೀಡುತ್ತಾ ಇತ್ತು. ಆದರೆ 1993 ರಿಂದ ಈ

ಸಬ್ಸಿಡಿಯನ್ನು ಕೊಡುತ್ತಾ ಇಲ್ಲ. ಆದರೆ ರಾಜ್ಯ ಸರ್ಕಾರದಿಂದ ಈ ರೀತಿಯ ಸಬ್ಸಿಡಿ ಕೊಡುವ ಯಾವ ವ್ಯವಸ್ಥೆ ಇರುವುದಿಲ್ಲ. ಈ ಕಾರಣಕ್ಕಾಗಿ ಈ ಒಂದು ಯೋಜನೆ ಬಗ್ಗೆ ಮಾನ್ಯ ಸದಸ್ಯರು ಹೇಳಿದಂತೆ ಇಡನ್ನು ಕೇಂದ್ರ ಸರ್ಕಾರಕ್ಕೆ ಬರೆದು ಸಬ್ಸಿಡಿ ಬರುವಂತೆ ಪ್ರಯತ್ನ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ನಮ್ಮ ಸಹದ್ಯೋಗಿಗಳ ಮಾತಿನ ಮುಖಾಂತರ ಈ ಅಸಂಪ್ರದಾಯವಾದ ಇಂಧನದ ಜೊತೆಗೆ ಇಂಧನ ಮೂಲಗಳಿಗೆ ಸಂಬಂಧಿಸಿದಂತೆ ಜೈವಿಕ ಅನಿಲ ಘಟಕಗಳನ್ನು ಸ್ಥಾಪನೆ ಮಾಡುವುದಾದರೆ ಅದಕ್ಕೆ ರಿಯಾಯಿತಿಯಲ್ಲಿ ಅವರಿಗೆ ಹಣಸಹಾಯ ಕೊಡಲಾಗುತ್ತದೆ. ಸುಮಾರು 6 ರಿಂದ 8 ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ ಅವರಿಗೆ ಕೊಡುತ್ತಿದ್ದೇವೆ. 20 ಸಾವಿರದಿಂದ 25 ಸಾವಿರ ಘಟಕಗಳು ಪ್ರತಿ ವರ್ಷ ಸ್ಥಾಪಿಸಲ್ಪಡುತ್ತವೆ. ಆದ್ದರಿಂದ, ಅದರ ಪ್ರಯೋಜನವನ್ನು ಕೂಡ ಜನಗಳು ಪಡೆಯಲು ಸಾಧ್ಯವಿದೆ.

ಶ್ರೀ ಎ. ರಾಮದಾಸ್ : ನಗರಪ್ರದೇಶಗಳಿಗೆ ಕೂಡ ತಮ್ಮ ಇಲಾಖೆಯಿಂದ, ಅದು ಅನ್ವಯವಾಗುತ್ತದೆಯೇ ?

ಶ್ರೀ ಎಂ. ಪಿ. ಪ್ರಕಾಶ್ : ಅದು ಗ್ರಾಮೀಣ ಪ್ರದೇಶಕ್ಕೆ ಇರುವುದರಿಂದ ಅದು ನಗರಪ್ರದೇಶಗಳಿಗೆ ಅನ್ವಯವಾಗುವುದಿಲ್ಲ.

MR. SPEAKER : What the hon'ble Member says is, whether it can be extended to cities.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ಅದನ್ನು ಉಪಯೋಗಿಸಿಕೊಳ್ಳಬೇಕು ಎಂಬ ವಿಚಾರ ಇದೆ. ಅದನ್ನು ಉಪಯೋಗಿಸಿಕೊಂಡ ಹಾಗೆ ಆಗುತ್ತದೆ ಸೌರಶಕ್ತಿ ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ ಅದನ್ನು ನಗರಪ್ರದೇಶಗಳಿಗೆ ವಿಸ್ತರಿಸಬೇಕೆಂದು ನಾನು ತಮ್ಮಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

MR. SPEAKER : All right. The Government will consider that. You should consider it. (addressing to hon'ble Minister)

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಈ ಜೈವಿಕ ಅನಿಲಗಳ ಪ್ಲಾಂಟ್ ಏನು ಇವೆ ಏನು ಹೊಸದಾಗಿ ಡೆವಲಪ್‌ಮೆಂಟ್ ಮಾಡಿದ್ದಾರೆ, ಏನು ಹೊಸ ಹೊಸ ತಂತ್ರಜ್ಞಾನದಿಂದ ಮಾಡಿದ್ದಾರೆ ಅವು ಎಲ್ಲಾ ಫೇಲ್ ಆಗಿವೆ. ಬಯೋಗ್ಯಾಸ್ ಪ್ಲ್ಯಾಂಟ್ಸ್ ಎಲ್ಲಾ ಫೇಲ್ ಆಗಿ, ಗ್ರಾಮೀಣ ಪ್ರದೇಶದ ಜನ ಸಾಲದ ಬಡ್ಡಿ ಕಟ್ಟಲಿಲ್ಲ ಎಂದು ಬ್ಯಾಂಕ್‌ನವರು ಅವರು ಮೇಲೆ ಡಿಕ್ರಿ ತರುತ್ತಾ ಇದ್ದಾರೆ. ಅದೇನಾದರೂ ತಾವು ವೇವ್ ಮಾಡಿಸಲು ಆಗುತ್ತದೆಯೆ ಇದು ಒಂದು. ಇನ್ನೊಂದು ಈಗ ಸೋಲಾರ್ ಸಿಸ್ಟಂನಿಂದ ನೀರು ಕಾಯಿಸಿಕೊಳ್ಳಲು ಮಾತರ ಶೇ.25ರಷ್ಟು ಸಬ್ಸಿಡಿ ಎಂದು ಇದೆ. ಮನೆಯಲ್ಲಿ ಉಪಯೋಗಿಸುವಂತಹ ಲೈಟ್‌ಗೆ ಮತ್ತು ಬೇರೆ ಉಪಕರಣಗಳಿಗೆ ಸಬ್ಸಿಡಿ ಕೊಡುವುದಿಲ್ಲ

ಎಂದು ಇದೆ. ಇದನ್ನು ಏನಾದರೂ ವಿಸ್ತರಣೆ ಮಾಡಲು ಆಗುತ್ತದೆಯೆ, ಏಕೆಂದರೆ ಇವತ್ತು ಸೋಲಾರ್ ಎನರ್ಜಿಯನ್ನು ತಾವು ಯುಟಿಲೈಜ್ ಮಾಡಿದರೆ, ಬೇಕಾದಷ್ಟು ಕೆಇಬಿಯ ವಿದ್ಯುತನ್ನು ಉಳಿತಾಯ ಮಾಡಬಹುದು. ನೀರು ಕಾಯಿಸುವುದಕ್ಕೆ ಮಾತ್ರ ಸಬ್ಸಿಡಿ ಇದೆ, ಇದನ್ನು ಎಲ್ಲದಕ್ಕೂ ಮಾಡುತ್ತೀರಾ?

ಶ್ರೀ ಎ. ರಾಮದಾಸ್ : ಈ ಸಬ್ಸಿಡಿಯನ್ನು ನಗರಪ್ರದೇಶಗಳಿಗೆ ಮುಂದುವರೆಸಿದರೆ ಸಹಾಯವಾಗುತ್ತದೆ.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಕೆಲವು ಸಂದರ್ಭಗಳಲ್ಲಿ ಘಟಕಗಳು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ ಎಂಬ ದೂರುಗಳು ಬಂದಿವೆ. ಆದರೆ, ಬೆಳಗಾಂ ಮಂಡ್ಯ ಪ್ರದೇಶದಲ್ಲಿ ಟರ್ನ್‌ಕೀ ಪ್ರಾಜೆಕ್ಟಾಗಿ ತೆಗೆದುಕೊಂಡು ಬಹಳ ಯಶಸ್ವಿಯಾಗಿ ಕೆಲಸವನ್ನು ಮಾಡಿದ್ದಾರೆ. ಈ ಧೀನಬಂಧು ಘಟಕಗಳು ಬಹಳ ಒಳ್ಳೆಯ ಕೆಲಸ ಮಾಡುತ್ತಾ ಇವೆ. ಅದರಲ್ಲಿ ಸುಧಾರಣೆ ಮಾಡುವ ಪ್ರಯತ್ನವನ್ನು ನಾವು ಮಾಡುತ್ತೇವೆ. ಹಿಂದೆ ಆಗಿರತಕ್ಕದ್ದರ ಬಗ್ಗೆ ನಾವು ನೋಡಲು ಹೋದರೆ ಸಂಬಂಧಪಟ್ಟ ಕಂಟ್ರಾಕ್ಟರ್ ಸಿಗುತ್ತಾ ಇಲ್ಲ ಮತ್ತು ಫಲಾನುಭವಿಗಳು ಅದರಲ್ಲಿ ಆಸಕ್ತಿ ಕಾಣದೆ ಇರುವಂತಹ ಉದಾಹರಣೆಗಳು ಇವೆ. ತಾವು ಐಆರ್‌ಪಿ ಯಾವ ಯಾವ ತಾಲ್ಲೂಕುಗಳಿಗೆ ಅನ್ವಯವಾಗುತ್ತದೆ, ಅನ್ವಯವಾಗಿರತಕ್ಕಂತದರಲ್ಲಿ ನಾವು ಸೌರ ಶಕ್ತಿಯಿಂದ ಬಂದ ವಿದ್ಯುತ್ ದೀಪಕ್ಕೆ ಕೂಡ ಸಬ್ಸಿಡಿಯನ್ನು ಕೊಡುತ್ತಾ ಇದ್ದೇವೆ. ಬರೀ ಹೀಟರಿಗೆ ಕೊಡುತ್ತಾ ಇಲ್ಲ, ಅದನ್ನು ಲ್ಯಾಟ್ರಿನ್‌ಗಳಲ್ಲಿಯೂ ತೆಗೆದುಕೊಳ್ಳಬಹುದು. ಅದು ಸುಮಾರು 2 ಸಾವಿರಕ್ಕೆ ಮೇಲ್ಪಟ್ಟದ್ದು ಆಗಿದೆ. ಅದನ್ನು ತೆಗೆದುಕೊಳ್ಳಲು ಸಾಧ್ಯತೆ ಇದೆ.

MR. SPEAKER : Last supplementary. Mr. Yogesh Bhat will put it.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ಮಹಾನಗರದಲ್ಲಿ ಎರಡು ಸಾವಿರ ಮೆಟ್ರಿಕ್ ಟನ್‌ನಷ್ಟು ಕಸ ಸಂಗ್ರಹವಾಗುತ್ತಿದೆ. ರಾಜ್ಯದಾದ್ಯಂತ ಹಲವು ಸಹಸ್ರ ಮೆಟ್ರಿಕ್ ಟನ್‌ನಷ್ಟು ಕಸ ಸಂಗ್ರಹ ಆಗುತ್ತಾ ಇರುತ್ತದೆ. ಈಗ ಆಧುನಿಕ ತಂತ್ರಜ್ಞಾನ ಬಂದಿದೆ ಕಸದಿಂದ ವಿದ್ಯುತ್ ಉತ್ಪಾದನೆ ಮಾಡುವುದರ ಬಗ್ಗೆ ಕೇಂದ್ರ ಸರ್ಕಾರ ಒಂದು ಯೋಜನೆ ಬಗ್ಗೆ ಕೂಡ ಟಿವಿಯಲ್ಲಿ ಪ್ರಕಟವಾದದ್ದನ್ನು ಗಮನಿಸಬಹುದು. ಈ ನಿಟ್ಟಿನಲ್ಲಿ ಸರ್ಕಾರದ ಸಚಿವರಲ್ಲಿ ವಿನಂತಿಮಾಡಿಕೊಳ್ಳುವುದು ಈ ಕಸದಿಂದ ವಿದ್ಯುತ್ ಉತ್ಪಾದನೆ ಮಾಡುವಂತ ತಂತ್ರಜ್ಞಾನವನ್ನು ನಮ್ಮ ರಾಜ್ಯದಲ್ಲಿ ಬಳಸಿ ಇದರ ಬೈ ಪ್ರಾಡಕ್ಟಾಗಿ ವಿದ್ಯುತ್ ಜೊತೆಗೆ ಗೊಬ್ಬರವನ್ನು ನಾವು ಪಡೆಯಲಿಕ್ಕೆ ಸಾಧ್ಯ ಇದೆ. ಇದರ ಬಗ್ಗೆ ಪರಿಶೀಲನೆ ಮಾಡಲಾಗುವುದೇ?

ಶ್ರೀ ಬಿ.ಎನ್. ಶಿವಣ್ಣನವರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ ಈಗಾಗಲೇ ನಾವು ಆ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಆದಷ್ಟು ಬೇಗನೆ ಅವರು ತಂದಂತಹ ವಿಷಯವನ್ನು ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು : ಎಷ್ಟು ಹೊತ್ತಿಗೆ ಪ್ರಶ್ನೋತ್ತರವನ್ನು ಪ್ರಾರಂಭ ಮಾಡಿದ್ದೇವೆ ಎಂದು ಗಡಿಯಾರವನ್ನು ನೋಡಬೇಕಾಗುತ್ತದೆ, ತಾವು ಅದಕ್ಕೆ ಸಹಕರಿಸಬೇಕಾಗುತ್ತದೆ.